**ಅಸಲು ದಾವಾ ಸಂ.235/2021**
ಪಿ .ಡಬ್ಲ್ಯೂ-1

ದಿನಾಂಕ 21-10-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಸ್ ಬಿ ವಕೀಲರಿಂದಃ-**

ಪ್ರತಿವಾದಿ ಸುಮಾರು 01 ವರ್ಷದ ವರೆಗೆ ಸಿಮೆಂಟನ್ನು ನನ್ನಿಂದ ಖರೀದಿ ಮಾಡಿರುತ್ತಾರೆ. ಅದರ ಹಣವನ್ನು ಬ್ಯಾಂಕ ಮುಖಾಂತರ ಪಾವತಿ ಮಾಡುತ್ತಿದ್ದರು. ಮುಂದುವರೆದು ನಗದಾಗಿಯೂ ಸಹ ಪಾವತಿ ಮಾಡುತ್ತಿದ್ದರು. ಪ್ರತಿವಾದಿ ತಾನು ಖರೀದಿ ಮಾಡಿದ್ದ ಸಿಮೆಂಟನ ಹಣವನ್ನು ಪೂರ್ತಿಯಾಗಿ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಕೇವಲ 50 ಸಾವಿರ ಹಣವನ್ನು ಬ್ಯಾಂಕ ಮೂಲಕ ಪಾವತಿ ಮಾಡಿದ್ದು ಬಾಕಿ ಅಂದಾಜು 1 ಲಕ್ಷ 2 ಸಾವಿರ ಹಣ ಇರುತ್ತದೆ. ಪ್ರತಿವಾದಿಯ ಖರೀದಿ ರಶೀದಿಗಳನ್ನು ನಾನು ಹಾಜರು ಪಡಿಸಿರುತ್ತೇನೆ. ಸದರಿ ಬಿಲ್ಲು ಗಳ ಮೇಲೆ ಪ್ರತಿವಾದಿಯ ಸಹಿ ಇರುವದಿಲ್ಲ. ಆದರೆ ಪ್ರತಿವಾದಿ ಸ್ವತಃ ಖರೀದಿ ಮತ್ತು ಬಾಕಿ ಹಣವನ್ನು ಒಪ್ಪಿರುತ್ತಾರೆ. ಪ್ರತಿವಾದಿ ಪೂರ್ತಿ ಹಣ ಕೊಟ್ಟಿದ್ದರೂ ಸಹ ಖೊಟ್ಟಿಯಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ .**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.